

# ದೇವರ ಬಳಿಗೆ ಮಾರ್ಗ





©2014 W.M. Press, Inc. Cover art, Edwin B. Wallace.

# ದೇವರು ನಮ್ಮ ಜಗತ್ತನ್ನೂ ಎಲ್ಲಾ ಜೀವರಾಶಿಗಳನ್ನು ಸೃಷ್ಟಿಸಿದನು 

‘‘ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು.’’

– ಆದಿಕಾಂಡ 1:1

‘‘ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ .............. ಆತನಲ್ಲಿ ಸೃಷ್ಟಿಸಲ್ಪಟ್ಟವು’’

– ಕೊಲೊಸ್ಸೆಯವರಿಗೆ 1:16

‘‘ಕರ್ತನಿಂದ ನಿಮಗೆ ಆಶೀರ್ವಾದವಾಗಲಿ. ಆತನು ಭೂಪರಲೋಕಗಳನ್ನು ಉಂಟುಮಾಡಿದ್ದಾನೆ. ಪರಲೋಕವು ಕರ್ತನದು; ಭೂಲೋಕವನ್ನು ನರಸಂತಾನಕ್ಕೆ ಕೊಟ್ಟಿದ್ದಾನೆ.’’

– ಕೀರ್ತನೆ 115:15,16

ದೇವರು ಮನುಷ್ಯನಿಗೆ ಭೂಮಿಯನ್ನು ಕೊಟ್ಟಾಗ ಅದು ಪರಿಪೂರ್ಣವಾಗಿತ್ತು ಏನು ನಡೆಯಿತೆಂದು ತಿಳಿಯಲು ಈ ಕಿರುಪುಸ್ತಕವನ್ನು ಓದಿರಿ.

# ದೇವರು ನಮ್ಮನ್ನು ಸೃಷ್ಟಿಸಿದನು



''ಆ ಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ............ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು.''

– ಆದಿಕಾಂಡ 1:26

''ಹೀಗಿರಲು ಕರ್ತನಾದ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು''.

– ಆದಿಕಾಂಡ 2:7

''ಮತ್ತು ಕರ್ತನಾದ ದೇವರು, 'ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ; ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟುಮಾಡುವೆನು' ಅಂದನು. ................ ಹೀಗಿರುವಲ್ಲಿ ಕರ್ತನಾದ ದೇವರು ಆ ಮನುಷ್ಯನಿಗೆ ಗಾಢ ನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ ತಾನು ಮನುಷ್ಯನಿಂದ ತೆಗೆದಿದ್ದ ಎಲುಬನ್ನು ಸ್ತ್ರೀಯಾಗ ಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು''. – ಆದಿಕಾಂಡ 2:18,21,22

(ಒಂದು ಬದುಕುವ ಪ್ರಾಣಿಯೆಂದರೆ ನಾವು ಶಾಶ್ವತವಾಗಿ (ಸದಾಕಾಲ) ಒಂದು ಕಡೆಯಲ್ಲಿರುವೆವು ಎಂದರ್ಥ.)

4

# ಆದಾಮನೂ ಹವ್ವಳೂ ದೇವರಿಗೆ ಅವಿಧೇಯರಾದರು



ಸೈತಾನನ ಸ್ವರಕ್ಕೆ ನಾವು ಎಂದೂ ಕಿವಿಗೊಡಬಾರದು.

''ಕರ್ತನಾದ ದೇವರು....... ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು. ಇದಲ್ಲದೆ ಕರ್ತನಾದ ದೇವರು ಆ ಮನುಷ್ಯನಿಗೆ ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು''. – ಆದಿಕಾಂಡ 2:15,17

ದೆವ್ವ ಅಥವಾ ಸೈತಾನನೆಂಬ ಹೆಸರುಳ್ಳ ಸರ್ಪವು ದೇವರ ಅಧಿಕಾರವನ್ನು ಪ್ರಶ್ನಿಸಿ ಸುಳ್ಳು ಹೇಳಿತು.

''ಆಗ ಸರ್ಪವು ಸ್ತ್ರೀಗೆ, 'ನೀವು ಹೇಗೂ ಸಾಯುವುದಿಲ್ಲ', ಅಂದಿತು. ಆಗ ಸ್ತ್ರೀಯು – ಆ ಮರದ ಹಣ್ಣು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಿಗೂ ಕೊಡಲು ಅವನೂ ತಿಂದನು''. – ಆದಿಕಾಂಡ 3:4,6

# ಆದಾಮನೂ ಹವ್ವಳೂ ಮುಂದೆ ಆ ತೋಟದಲ್ಲಿರಲು ಆಗಲಿಲ್ಲ



''ಕರ್ತನಾದ ದೇವರು ...................... ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು. ಅದಲ್ಲದೆ ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ............ ಕೆರೂಬಿಯರನ್ನೂ ಧಗಧಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನು ಇರಿಸಿದನು.''

– ಆದಿಕಾಂಡ 3:23,24

# ಆದಾಮನೂ ಹವ್ವಳೂ ಪಾಪ ಮಾಡಿದ ದಿನವು 

## ಮಾನವಕುಲಕ್ಕೆ ಒಂದು ದುಃಖಕರ ದಿನ



"............ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; .............. ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು." – ರೋಮಾಪುರದವರಿಗೆ 5:12

## ಜ್ಞಾಪಕದಲ್ಲಿಡಬೇಕಾದ ಒಂದು ವಿಷಯ

ಪ್ರತಿ ಮನುಷ್ಯನೂ ಪಾಪದ ಸ್ವಭಾವ ಹೊಂದಿದವನಾಗಿ ಹುಟ್ಟುತ್ತಾನೆ ಮತ್ತು ಒಂದು ದಿನ ಸಾಯುತ್ತಾನೆ. ಯಾಕೆಂದರೆ ಪಾಪದಿಂದ ಮರಣವು ಬಂತು. (ಪುನಃ ರೋಮಾಪುರದವರಿಗೆ 5:12 ಓದಿರಿ.)

# ನಮ್ಮನ್ನು ಪಾಪದಿಂದ ಬಿಡುಗಡೆ ಮಾಡಲು ತನ್ನ ಒಬ್ಬನೇ ಮಗನನ್ನು ಕಳುಹಿಸುವುದೇ ದೇವರ ಯೋಜನೆಯಾಗಿತ್ತು.



''ಆಕೆಯು ಒಬ್ಬ ಮಗನನ್ನು ಹಡೆಯುವಳು, ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು.'' – ಮತ್ತಾಯ 1:21

ಮಾನವ ಕುಲವನ್ನು ಪ್ರವೇಶಿಸಲು ದೇವರ ಮಗನು ಒಂದು ಮಾನವ ಶಿಶುವಾಗಿರಬೇಕಾಯಿತು.

''ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ.''

– ಕೊಲೊಸ್ಸೆಯವರಿಗೆ 2:9

# ಯೇಸು ದೇವರಾಗಿದ್ದನು - ಮನುಷ್ಯ ಆಕಾರದಲ್ಲಿ

"ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು ............... ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು ..............."

– ಯೋಹಾನ 1:1,14

ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು ........... 'ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು' ಎಂಬದು. "ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ."

– ಮತ್ತಾಯ 1:22,23

"ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಆತನ ಬಾಹುವಿನ ಮೇಲಿರುವದು; ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು." – ಯೆಶಾಯ 9:6

# ಯೇಸು ಕ್ರಿಸ್ತನು ನಮ್ಮ ಪರಿಪೂರ್ಣ ಯಜ್ಞ

''............ ಪಾಪಜ್ಞಾನವಿಲ್ಲದ ಆತನು .............'' – 2 ಕೊರಿಂಥದವರಿಗೆ 5:21



''ಆತನು ಯಾವ ಪಾಪವನ್ನೂ ಮಾಡಲಿಲ್ಲ.............''
– 1 ಪೇತ್ರನು 2:22

ಮನುಷ್ಯನು ಮಾಡುವ ಯಾವ ಯಜ್ಞವೂ ಪಾಪನಿವಾರಣೆ ಮಾಡುವಷ್ಟು ಪರಿಪೂರ್ಣವಾಗಿರಲಿಲ್ಲ.

''ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ'' – ಇಬ್ರಿಯರಿಗೆ 10:4

ಯೇಸು ದೇವರ ಕುರಿಮರಿ. ''ಅಗೋ(ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು!''
–ಯೋಹಾನ 1:29b

## ಯೇಸು ನಮ್ಮನು ರಕ್ಷಿಸಲು ತನ್ನ ಪ್ರಾಣವನ್ನು ಕೊಟ್ಟನು.

ಯೇಸುವನ್ನು ಕ್ರೂರ ಜನರು ದ್ವೇಷಿಸಿದ್ದರಿಂದ ಆತನನ್ನು ಒಂದು ಮರದ ಕ್ರೂಜೆಗೆ ಮೊಳೆಗಳಿಂದ ಜಡಿದರು. ಆದರೆ ಆತನ ಮರಣವು ದೇವರ ಯೋಜನೆಯಾಗಿತ್ತು. ನಿನ್ನನ್ನೂ ನನ್ನನ್ನೂ ನಮ್ಮ ಪಾಪಗಳಿಂದ ಬಿಡಿಸಿ ರಕ್ಷಿಸಲು ಯೇಸು ತನ್ನ ಸ್ವ ಇಚ್ಛೆಯಿಂದ ತನ್ನ ಪ್ರಾಣವನ್ನು ಕೊಟ್ಟನು.

ಯೇಸು ಹೇಳಿದ್ದು, ''ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು. ನನ್ನ ಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು. ಅದನ್ನು ತಿರಿಗಿ ಪಡಕೊಳ್ಳುವುದಕ್ಕೆ ನನಗೆ ಅಧಿಕಾರ ಉಂಟು;'' – ಯೋಹಾನ 10:18

### ದೇವರ ಕುರಿಮರಿಯ ರಕ್ತದಿಂದ ನಾವು ವಿಮೋಚಿಸಲ್ಪಟ್ಟಿದ್ದೇವೆ

''... ನಿಮಗೆ ಬಿಡುಗಡಯಾದದ್ದು ಬೆಳ್ಳಿ, ಬಂಗಾರ ಮೊದಲಾದ ನಶಿಸಿಹೋ ಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ......'' – 1 ಪೇತ್ರನು 1:18,19

### ಬೇರೆ ಯಾವ ಯಜ್ಞಗ್ಗಳೂ ಪಾಪ ತೊಳೆಯಲಾರವು


''ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನುನೆರವೇರಿಸಿದದರಿಂದಲೇ ನಾವು ಶುದ್ಧರಾದೆವು''. – ಇಬ್ರಿಯರಿಗೆ 10:10

''ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ
ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವುದು ಮತ್ತು ನಿಶ್ಚಯವಲ್ಲವೇ.''

– ರೋಮಾಪುರದವರಿಗೆ 5:9


''ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ
ಬರುವಾಗ ನನ್ನನ್ನು ನೆನಸಿಕೋ.''

ಈ ಕಳ್ಳನು ಯೇಸುವಿನ ಮೇಲೆ ನಂಬಿಕೆ ಯಿಟ್ಟು ರಕ್ಷಿಸಲ್ಪಟ್ಟನು.



''......ಈ ಹೊತ್ತೇ ನೀನು, ನನ್ನ ಸಂಗಡ ಪರದೈಸಿನಲ್ಲಿ ರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.''

– ಲೂಕ 23:43





ಈ ಕಳ್ಳನು ಯೇಸು ವಿನ ಮೇಲೆ ನಂಬಿಕೆ ಯಿಡಲಿಲ್ಲ, ಅದ್ದರಿಂದ ರಕ್ಷಿಸ್ಪಡ ಲಿಲ್ಲ.

''ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟನು............''

– ರೋಮಾಪುರದವರಿಗೆ 5:8

# ದೇವರ ಮಗನ ಮೇಲೆ ನಂಬಿಕೆ ಇಟ್ಟವರೆಲ್ಲರಿಗೂ ಜೀವವು ಇದೆ

''ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.'' – ಯೋಹಾನ 3:16

''ದೇವರು ನಮ್ಮನ್ನು ಅಂಧಕಾರದ ಧೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ(ಆತನ ರಕ್ತದಲ್ಲಿ) ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆ (ವಿಮೋಚನೆ) ಯಾಯಿತು.'' – ಕೊಲೊಸ್ಸೆಯವರಿಗೆ 1:13,14

ಬಿಡುಗಡೆ (ವಿಮೋಚನೆ) ಎಂದರೆ ನಾವು ಪುನಃ ಕೊಂಡುಕೊಳ್ಳಲ್ಪಟ್ಟೆವು.

# ಆತನು ಎದ್ದಿದ್ದಾನೆ!



“ಆಗ ದೂತನು ಆ ಹೆಂಗಸ ರಿಗೆ, ನೀವು ಹೆದರಬೇಡಿರಿ. ಶಿಲುಬೆಗೆ ಹಾಕಲ್ಪಟ್ಟಿದ್ದ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು, ಆತನು ಇಲ್ಲಿ ಇಲ್ಲ; ತಾನು ಹೇಳಿದಂತೆ ಎದ್ದಿದ್ದಾನೆ; ಬನ್ನಿ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ.”

– ಮತ್ತಾಯ 28:5,6

## ಯೇಸು ಮರಣದಿಂದ ಎದ್ದು ಬಂದನು

''ನಾನು..... ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು. ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ.'' – ಪ್ರಕಟನೆ 1:18

''........ ನಾನು ಬದುಕುವದರಿಂದ ನೀವೂ ಬದುಕುವಿರಿ.'' – ಯೋಹಾನ 14:19


''ಯೇಸು ಮರಣವನ್ನು ಜಯಸಿ ಮರಣದ ಬೀಗದ ಕೈಗಳನ್ನು ಹೊಂದಿರುವ ದರಿಂದ ನಾವು ಇನ್ನು ಮರಣಕ್ಕೆ ಹೆದರಬೇಕಾಗಿಲ್ಲ. ''ನನಗೆ ಹೆದರಿಕೆಯುಂಟಾದಾಗ ನಿನ್ನನ್ನೇ ಆಶ್ರಯಿಸಿಕೊಳ್ಳುವೆನು.'' – ಕೀರ್ತನೆ 56:3

(ದೇವರ ವಾಗ್ದಾನಗಳಿಗಾಗಿ 46 ನೇ ಪುಟ ನೋಡಿರಿ.)

## ಯೇಸು ನಿನ್ನನ್ನು ರಕ್ಷಿಸಬಲ್ಲನು ನಿನಗಾಗಿ ಪ್ರಾರ್ಥಿಸುತ್ತಾ ಇದ್ದಾನೆ

''ಆತನಾದರೋ ಸದಾಕಾಲವಿರುವದರಿಂದ.... ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆ ಮಾಡುವುದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.'' – ಇಬ್ರಿಯರಿಗೆ 7:24,25

# ನೀನೂ ನಾನೂ ನಿತ್ಯಜೀವವನ್ನು ಪಡೆಯಬಹುದು




ನೀನು ಯಾವ ಮಾರ್ಗ ಆರಿಸಿ ಕೊಂಡಿದ್ದೀ?

ದೇವರೊಂದಿಗೆ ನಿತ್ಯಜೀವ ಹೊಂದಲು ಯೇಸು ಕ್ರಿಸ್ತನೇ ಮಾರ್ಗ.

ದೆವ್ವ ಅಥವಾ ಸೈತಾನನು ನಿತ್ಯ ಮರಣಕ್ಕೆ ಮಾರ್ಗ.

ಈ ಹುಡುಗನು ನಿತ್ಯಜೀವಕ್ಕಾಗಿ ಸರಿಯಾದ ಆಯ್ಕೆ ಮಾಡಿಕೊಂಡಿದ್ದಾನೆ.

## ನೀನು ಯಾವ ಆಯ್ಕೆ ಮಾಡುತ್ತಿ?

''..........ನೀವು ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ.''

– ಯೆಹೋಶುವ 24:15


''..... ಆದುದರಿಂದ ನೀವೂ ನಿಮ್ಮ ಸಂತತಿಯವರಿಗೂ ಬದುಕಿಕೊಳ್ಳುವಂತೆ ಜೀವವನ್ನೇ ಆದುಕೊಳ್ಳಿರಿ.'' – ಧರ್ಮೋಪದೇಶಕಾಂಡ 30:19

## ನಿತ್ಯಜೀವಕ್ಕೆ ಯೇಸುವು ಮಾರ್ಗ!

''ಬರಬೇಕಾದ ರಕ್ಷಣೆಯ ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ.'' – ಅಪೊಸ್ತಲರ ಕೃತ್ಯಗಳು 4:12

''ನಾನೇ, ನಾನೇ ಕರ್ತನು; ನಾನು ಹೊರತು ಯಾವ ರಕ್ಷಕನೂ ಇಲ್ಲ.'' – ಯೆಶಾಯ 43:11

# ನಮಗೆ ನಿತ್ಯಜೀವವು ಬೇಕಾಗಿದ್ದರೆ ನಾವು ಯಾಕೆ ಯೇಸುವನ್ನೇ ಆರಿಸಿಕೊಳ್ಳಬೇಕು?



**1. ಕ್ರಿಸ್ತನು ನನಗಾಗಿ ಬಂದಾತನು.**

''.....ಅವುಗಳಿಗೆ (ಅವರಿಗೆ) ಜೀವವು ಇರಬೇಕೆಂತ ...... ಬಂದೆನು.'' – ಯೋಹಾನ 10:10

**2. ಕ್ರಿಸ್ತನು ನಮ್ಮನ್ನು ಪ್ರೀತಿಸಿ ನಮಗಾಗಿ ಸತ್ತಾತನು.**

''...... ಆತನು (ದೇವಕುಮಾರನು)...... ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿ ಬಿಟ್ಟನು''. – ಗಲಾತ್ಯದವರಿಗೆ 2:20

ಯೇಸು ನಮ್ಮಂತೆ ರಕ್ತ ಮಾಂಸ ಧಾರಿಯಾಗಿ ಮನುಷ್ಯ ನಾದನು,

‘‘..... ತನ್ನ ಮರಣದಿಂದಲೇ ಮರಣಾಧಿ ಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿ ಬಿಡುವುದಕ್ಕೂ, ಮರಣ ಭಯದ ದೆಸೆಯಿಂದ ತಮ್ಮ ಜೀವಮಾನ ದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತ ಮಾಂಸಧಾರಿಯಾದನು.’’ – ಇಬ್ರಿಯರಿಗೆ 2:14,15

**3. ಯೇಸುವಿನ ರಕ್ತ ಮಾತ್ರ ನಮ್ಮ ಪಾಪ ಪರಿಹರಿಸ ಶಕ್ತಿಯುಳ್ಳದ್ದು.**


‘‘ರಕ್ತವು ಪ್ರಾಣಾಧಾರ ವಾಗಿರುವ ಕಾರಣ ಅದರಿಂದ ದೋಷಪರಿಹಾರ ವಾಗುತ್ತದಷ್ಟೆ.’’

– ಯಾಜಕಕಾಂಡ 17:11

‘‘...... ಆತನ ಮಗ ನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ.’’ – 1 ಯೋಹಾನ 1:7

‘‘ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆ ಯಾಯಿತು.’’

– ಕೊಲೊಸ್ಸೆಯವರಿಗೆ 1:14



## 4. ಕ್ರಿಸ್ತನು ಸತ್ತವರೊಳಗಿಂದಎದ್ದು ಬಂದಾತನು.

"ಕ್ರಿಸ್ತನು ಸತ್ತಮೇಲೆ ಜೀವಿತನಾಗಿ ಎದ್ದು ಬಂದದರಿಂದ ಆತನು ಇನ್ನು ಮುಂದೆ ಸಾಯತಕ್ಕವನಲ್ಲ, ಮರಣವು ಇನ್ನೂ ಆತನನ್ನು ಆಳುವದಿಲ್ಲವೆಂದು ನಮಗೆ ತಿಳಿದದೆ."

– ರೋಮಾಪುರದವರಿಗೆ 6:9

ಜೀವಿಸುವವರು ಇನ್ನು ಮೇಲೆ ತಮಗಾಗಿ ಜೀವಿಸದೇ ತಮಗೋಸ್ಕರ ಸತ್ತು ಎದ್ದು ಬಂದಾತನಿಗಾಗಿ ಜೀವಿಸಬೇಕೆಂತಲೇ ಆತನು ಎಲ್ಲರಿಗೋಸ್ಕರ ಸತ್ತನು."

– 2 ಕೊರಿಂಥದವರಿಗೆ 5:15

ಯೇಸು ಹೇಳಿದ್ದು "…..ನಾನು ಬದುಕುವದರಿಂದ ನೀವೂ ಬದುಕುವಿರಿ."

– ಯೋಹಾನ 14:19

**5. ನಾವು ನಿತ್ಯ ಜೀವಕ್ಕಾಗಿ ಎಬ್ಬಿಸಲ್ಪಡಬೇಕಾದರೆ (ಶಾಶ್ವತವಾಗಿ ಜೀವಿಸಬೇಕಾದರೆ) ಕ್ರಿಸ್ತನ ಆತ್ಮವನ್ನು ನಮ್ಮಲ್ಲಿ ಹೊಂದಿರಬೇಕು.**

''.... ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನಾಗಿರುವದೇ.''

– ಕೊಲೊಸ್ಸೆಯವರಿಗೆ 1:27b

''ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು.''

– ರೋಮಾಪುರದವರಿಗೆ 8:11

''ಕ್ರಿಸ್ತನ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದು ಖಚಿತ ಪಡಿಸಿಕೊಳ್ಳಿರಿ .... ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನ ಕ್ರಿಸ್ತನವನಲ್ಲ.''

– ರೋಮಾಪುರದವರಿಗೆ 8:9

# ನೀನು ಹೇಗೆ ನಿತ್ಯಜೀವವನ್ನು ಪಡೆಯಬಹುದು?

24 ನೇ ಪುಟದಲ್ಲಿ ಪ್ರಾರಂಭವಾಗುವ ಮೂಲ ಸೂತ್ರಗಳನ್ನು ಅನುಸರಿಸು.



''ಒಬ್ಬ ಹುಡುಗನಾದರೂ ಶುದ್ಧವೂ ಸತ್ಯವೂ ಆದ ನಡತೆಯಿಂದಲೇ ತನ್ನ ಗುಣವನ್ನು ತೋರ್ಪಡಿಸಿಕೊಳ್ಳುವನು.''
– ಜ್ಞಾನೋಕ್ತಿ 20:11

''ಯೇಸುವಿನ ಪ್ರೀತಿಯು ಉಂಟು ನನ್ನ ಮೇಲೆಯು, ಸದ್ವೇದ ಮಾತಿದು.''

''ಆದರೆ ಯೇಸು– ಆ ಕೂಸುಗಳನ್ನು ತನ್ನ ಬಳಿಗೆ ಕರತರಿಸಿ, –ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿಸಿರಿ. ಅವುಗಳಿಗೆ ಅಡ್ಡಿ ಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ.'' ಅಂದನು.

– ಲೂಕ 18:16

''ಹಾಗೆಯೇ ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟುಹೋಗುವದು ಪರಲೋಕದಲ್ಲಿರುವ ನಿಮ್ಮ ತಂದೆಯ ಚಿತ್ತವಲ್ಲ''.

– ಮತ್ತಾಯ 18:14

ನೀನು ಎಲ್ಲೇ ಇರು, ಎಲ್ಲೇ ವಾಸಿಸು, ಯೇಸು ನಿನ್ನನ್ನು ಪ್ರೀತಿಸುತ್ತಾನೆ ಮತ್ತು ನಿನಗಾಗಿ ಸತ್ತಿದ್ದಾನೆ. ಯೇಸುವಿಗೆ ನಿನ್ನ ಪ್ರೀತಿಯೂ ಬೇಕು. ಆತನಿಗೆ ವಿಧೇಯನಾಗುವದರ ಮೂಲಕ ನೀನು ಯೇಸುವಿಗೆ ನಿನ್ನ ಪ್ರೀತಿಯನ್ನು ತೋರಿಸಬಹದು.

''ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ.''

– ಯೋಹಾನ 14:15

# ದೇವರ ಬಳಿಗೆ ಹೋಗುವ ಮಾರ್ಗವನ್ನು ಹೇಗೆ ಕಂಡುಕೊಳ್ಳುವಿ?

1. ನೀನು ಪಾಪಿಯೆಂದು ಒಪ್ಪಿಕೋ (ದೇವರಿಗೆ ಅವಿಧೇಯನಾಗಿದ್ದಿ ಎಂದು).

   ''ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.''

   – ರೋಮಾಪುರದವರಿಗೆ 3:23

2. ಯೇಸುವಿನ ಮೂಲಕ ದೇವರ ಬಳಿಗೆ ಬಾ.

   ''ಏಕಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ.'' – 1 ತಿಮೊಥೆ 2:5

   ''ಆದಕಾರಣ ಆತನು (ಯೇಸು) ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವುದಕ್ಕೆ ಶಕ್ತನಾಗಿದ್ದಾನೆ.........'' – ಇಬ್ರಿಯರಿಗೆ 7:25


   ಯೇಸು ''................ ನನ್ನ ಬಳಿಗೆ ಬರುವವನನ್ನು ನಾನು ತಳ್ಳಿಬಿಡುವದೇ ಇಲ್ಲ.''

   – ಯೋಹಾನ 6:37

3. ನಿನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡು. (ಪಶ್ಚಾತ್ತಾಪ ಎಂದರೆ ''ಪಾಪಗಳನ್ನು ಬಿಟ್ಟುಬಿಡುವಷ್ಟು ಬೇಸರಗೊಳ್ಳುವದು.'')

''ಆದುದರಿಂದ ದೇವರು ನಿಮ್ಮ ಪಾಪಗಳನ್ನು ಅಳಿಸಿ ಬಿಡುವ ಹಾಗೆ ನೀವು ಪಶ್ಚಾತ್ತಾಪ ಪಟ್ಟು ಆತನ ಕಡೆಗೆ ತಿರುಗಿಕೊಳ್ಳಿರಿ.''
– ಅಪೊಸ್ತಲರ ಕೃತ್ಯಗಳು 3:19

''.... ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಆಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ.'' – 2 ಪೇತ್ರ 3:9




4. ನಿನ್ನ ಪಾಪಗಳನ್ನು ಯೇಸುವಿಗೆ ಅರಿಕೆ ಮಾಡು. (ಅರಿಕೆ ಮಾಡು ಎಂದರೆ ಹೇಳು ಅಥವಾ ಒಪ್ಪಿಕೋ.)

26 ಕೆಳಗಿನ ಗೆರೆಗಳ ಮೇಲೆ 25 ನೇ ಪುಟದಲ್ಲಿ ಪ್ರಾರ್ಥಿಸುವ ಕೈಗಳಲ್ಲಿರುವ 1 ಯೋಹಾನ 1:9 ವಚನವನ್ನು ಬರೆ.

________________________________________

________________________________________

________________________________________

________________________________________

5. ನಿನ್ನ ಪಾಪಗಳನ್ನು ಬಿಟ್ಟು ಬಿಡು.

(ಬಿಟ್ಟುಬಿಡು ಎಂದರೆ ''ಮಾಡದಿರು, ಅದರಷ್ಟಕ್ಕೇ ಇರಿಸಿ'') ''ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು; ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು.''

– ಜ್ಞಾನೋಕ್ತಿ 28:13

''ಕೆಟ್ಟದ್ದಕ್ಕೆ ಹೋಗದೆ ಒಳ್ಳೆಯದನ್ನೇ ಮಾಡು..........'' – ಕೀರ್ತನೆ 37:27a





6. ಯೇಸು ಕ್ರಿಸ್ತನ ಮೇಲೆ ನಂಬಿಕೆಯಿಡು.

"…. ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು.........."

– ರೋಮಾಪುರದವರಿಗೆ 10:9

"… ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು."

– ಅಪೊಸ್ತಲರ ಕೃತ್ಯಗಳು 16:31

"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ…. ಅದು ದೇವರ ವರವೇ ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಆದುದರಿಂದ ಹೊಗಳಿ ಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ."

– ಎಫೆಸದವರಿಗೆ 2:8,9



7. ಯೇಸು ಕ್ರಿಸ್ತನನ್ನು ನಿನ್ನ ಹೃದಯದೊಳಗೂ ಜೀವನದೊಳಗೂ ಸ್ವೀಕರಿಸು.

ನೀನೇ ನಿನ್ನ ಹೃದಯದ ಬಾಗಿಲನ್ನು ತೆರೆದು ಯೇಸುವನ್ನು ಒಳಗೆ ಆಮಂತ್ರಿಸ ಬೇಕು. ಯೇಸು ಹೇಳಿದ್ದು "ಇಗೋ, ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ. ಯಾವನಾದರೂ ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು. ಅವನು ನನ್ನ ಸಂಗಡ ಊಟ ಮಾಡುವನು." – ಪ್ರಕಟನೆ 3:20

"ಯಾರಾರು ಆತನನ್ನು ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು." – ಯೋಹಾನ 1:12

ನೀನು ಈ ವರೆಗೆ ಪ್ರಾರ್ಥಿಸದೆ ಇದ್ದು, ಪ್ರಾರ್ಥಿಸಲು ನಿನಗೆ ಸಹಾಯವು ಬೇಕಾಗಿದ್ದರೆ, ಕೆಳಗಿನ ಪ್ರಾರ್ಥನೆಯನ್ನು ಒಂದು ಮಾದರಿ ಪ್ರಾರ್ಥನೆಯಾಗಿ ಅನುಸರಿಸಬಹುದು.



ಪ್ರಿಯ ಕರ್ತನಾದ ಯೇಸುವೇ.

ನನ್ನ ಪಾಪಗಳನ್ನು ಪರಿಹರಿಸಲು (ತೆಗೆದು ಹಾಕಲು) ನೀನು ಕ್ರೂಜೆಯ ಮೇಲೆ ಸತ್ತದ್ದಕ್ಕಾಗಿ ನಿನಗೆ ವಂದನೆ. ನಾನು ಮಾಡಿದ ಎಲ್ಲಾ ತಪ್ಪುಗಳಿಗಾಗಿ ದುಃಖಪಡುತ್ತೇನೆ. ದಯವಿಟ್ಟು ನನ್ನ ಹೃದಯದೊಳಗೆ ಬಂದು ನನ್ನ ಹೃದಯದಲ್ಲಿ ಯಾವಾಗಲೂ (ನಿತ್ಯವಾಗಿ) ವಾಸಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಹೃದಯವನ್ನು ಶುದ್ಧಮಾಡಲು ಈಗಲೇ ನಿನ್ನನ್ನು ನಂಬುತ್ತೇನೆ. ನಿನ್ನನ್ನು ನನ್ನ ಸ್ವಂತ ರಕ್ಷಕನಾಗಿಯೂ ಕರ್ತನಾಗಿಯೂ ಸ್ವೀಕರಿಸುತ್ತೇನೆ.

ಯೇಸುವಿನ ಹೆಸರಿನಲ್ಲಿ ಆಮೆನ್

''................ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ............... ಯಾವನು ದೇವರ ಮಗನನ್ನು ಅಂಗೀಕರಿಸಿದನೋ ಅವನಿಗೆ ಆ ಜೀವ ಉಂಟು''.

–1 ಯೋಹಾನ 5:11,12

''.............. ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ......... ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ.'' – ಯೋಹಾನ 5:24

.... ದೇಹವನ್ನು ಬಿಟ್ಟು ಕರ್ತನ ಬಳಿಯಲ್ಲಿರುವದೇ ಉತ್ತಮವೆಂದು ಎಣಿಸುತ್ತೇವೆ. (2 ಕೊರಿಂಥ 5:8)

''........... ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರ ಭೂತನೇ.''

(ಕೊಲೊಸ್ಸೆಯವರಿಗೆ 1:27)

ನಿನ್ನ ಪಾಪಗಳನ್ನು ಕ್ಷಮಿಸಲು ನೀನು ಯೇಸುವನ್ನು ಕೇಳಿದ್ದೀಯಾದರೆ, ಕರ್ತನಾದ ಯೇಸು ಕ್ರಿಸ್ತನನ್ನು ನಿನ್ನ ರಕ್ಷಕನಾಗಿ ನಂಬಿದ್ದರೆ, ನಿನ್ನ ಹೆಸರನ್ನು ಕೆಳಗೆ ಬರೆ.



ಪ್ರತಿದಿನವೂ ಬೈಬಲಿನ (ಸತ್ಯವೇದದ, ದೇವರ ವಾಕ್ಯದ) ವಚನಗಳನ್ನು ಓದಿ, ನಿನಗೆ ಸಹಾಯವಾಗುವ ವಿಶೇಷ ವಚನಗಳನ್ನು ಕಂಠಪಾಠ ಮಾಡುವದರ ಮೂಲಕ ಅವುಗಳನ್ನು ನಿನ್ನ ಹೃದಯದಲ್ಲಿ ಬಚ್ಚಿಟ್ಟುಕೋ.

(ಅಂಥ ಅನೇಕ ವಚನಗಳು ಈ ಕಿರುಪುಸ್ತಕದಲ್ಲಿದೆ.)

''ದೈವ ಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ.''

2 ತಿಮೋಥಿ 3:16

## ಪ್ರಾರ್ಥನೆಯಲ್ಲಿ ಯೇಸುವಿನೊಂದಿಗೆ ಯಾವ ವೇಳೆಯಲ್ಲಾದರೂ ಮಾತಾಡು

ಜೀವನದ ಎಲ್ಲಾ ಉತ್ತಮ ವಸ್ತುಗಳಿಗಾಗಿ ನಿನಗೆ ವಂದನೆ ಯೇಸುವೇ. ಆತನು ನಿನಗೆ ಮಾಡಿದ ಎಲ್ಲವುಗಳಿಗಾಗಿಯೂ ನಿನ್ನ ಆತ್ಮವನ್ನು ರಕ್ಷಿಸಿದ್ದಕ್ಕಾಗಿಯೂ ಆತನನ್ನು ಸ್ತುತಿಸು. ನಿನಗೆ ಏನು ಅಗತ್ಯವಿದ್ದರೂ ಪ್ರಾರ್ಥಿಸು ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸು.



‘‘............ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆ...........’’

– 1 ಯೋಹಾನ 5:14

‘‘....ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿನಗೆ ಕೊಡುವನು.’’– ಯೋಹಾನ 16:23

‘‘.... ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ....’’

– ಯಾಕೋಬನು 5:16 ಅ

‘‘....ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ.’’

– ಮತ್ತಾಯ 5:44

# ಯೇಸು ತನ್ನ ಶಿಷ್ಯರಿಗೆ ಕಲಿಸಿದ ಪ್ರಾರ್ಥನೆ
# (ಯೇಸುವನ್ನು ಹಿಂಬಾಲಿಸುವವನು ಆತನ ಶಿಷ್ಯನು.)

ಯೇಸು ತನ್ನ ಶಿಷ್ಯರಿಗೆ ಪ್ರಾರ್ಥನೆ ಮಾಡಲು ಹೇಳಿದನು. ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪುಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೇ ಕೇಡಿನಿಂದ ನಮ್ಮನ್ನು ತಪ್ಪಿಸು. ಯಾಕಂದರೆ ರಾಜ್ಯವೂ, ಬಲವೂ, ಮಹಿಮೆಯೂ ಸದಾಕಾಲವೂ ನಿನ್ನವೇ. ಆಮೆನ್. – ಮತ್ತಾಯ 6:9,13

ಈ ಪ್ರಾರ್ಥನೆಯನ್ನು ಕಂಠಪಾಠ ಮಾಡತಕ್ಕದ್ದು. ಅನೇಕ ವೇಳೆ ವಿಶ್ವಾಸಿಗಳು ಈ ಪ್ರಾರ್ಥನೆಯನ್ನು ಗಟ್ಟಿಯಾಗಿ ಒಟ್ಟಾಗಿ ಹೇಳುತ್ತಾರೆ.

# ದೇವರ ದಶಾಜ್ಞೆಗಳು ನಾವು ಹೇಗೆ ಜೀವಿಸಬೇಕೆಂದು ಕಲಿಸುತ್ತದೆ.
# (ವಿಮೋಚನಕಾಂಡ, ಅಧ್ಯಾಯ 20)

ಮೊದಲಿನ ನಾಲ್ಕು ಆಜ್ಞೆಗಳು ದೇವರ ಮೇಲಣ ನಮ್ಮ ಪ್ರೀತಿಯ ಕುರಿತು

1. ''ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು''.
2. ''ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು.... ಯಾವದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆ ಮಾಡಲೂ ಬಾರದು.''
3. ''ನಿನ್ನ ದೇವರಾದ ಕರ್ತನ ಹೆಸರನ್ನು ಅಯೋಗ್ಯಕಾರ್ಯಕ್ಕಾಗಿ ಎತ್ತಬಾರದು.''
4. ''ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.''

ಕೊನೆಯ ಆರು ಆಜ್ಞೆಗಳು ಮನುಷ್ಯನ ಮೇಲಣ ನಮ್ಮ ಪ್ರೀತಿಯ ಕುರಿತು ದಶಾಜ್ಞೆಗಳು (ಮುಂದುವರಿದದ್ದು).

5. ''ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.''

6. ''ನರಹತ್ಯೆ ಮಾಡಬಾರದು.''

7. ''ವ್ಯಭಿಚಾರ ಮಾಡಬಾರದು.'' (ವ್ಯಭಿಚಾರವೆಂದರೆ ಗಂಡ ಅಥವಾ ಹೆಂಡತಿ ಲೈಂಗಿಕವಾಗಿ ಅಪನಂಬಿಗಸ್ತರಾಗುವದು.)

8. ''ಕದಿಯ ಬಾರದು.''

9. ''ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.''

10. ''ಮತ್ತೊಬ್ಬನ ...... ಯಾವದನ್ನು ಆಶಿಸಬಾರದು.''

**ದೇವರಿಗೆ ವಿಧೇಯರಾಗುವದರಿಂದ ಪ್ರಾರ್ಥನೆಗಳಿಗೆ ಉತ್ತರಗಳು ದೊರೆಯುತ್ತವೆ.**

''ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು.''

– 1 ಯೋಹಾನ 3:22


# ಎರಡು ಅತಿಮುಖ್ಯ ಆಜ್ಞೆಗಳು ದೇವರನ್ನು ಪ್ರೀತಿಸುವದು.

1. ''ಯೇಸು ಅವನಿಗೆ, ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು ಮೊದಲನೆಯದು ಎಂದು ಹೇಳಿದನು.'' – ಮತ್ತಾಯ 22:37,38

## ಮನುಷ್ಯನನ್ನು ಪ್ರೀತಿಸುವದು

''ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು. ಅದು ಯಾವದಂದರೆ: ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬುದೇ.''

– ಮತ್ತಾಯ 22:39




34 ಮತ್ತು 35 ನೇ ಪುಟಗಳಲ್ಲಿರುವ ಎಲ್ಲಾ ದಶಾಜ್ಞೆಗಳು ಈ ಎರಡು ಅತಿ ಮುಖ್ಯ ಆಜ್ಞೆಗಳಲ್ಲಿ ಸೇರಿವೆ.

## ಶ್ರೇಷ್ಠ "ಪ್ರೀತಿಯ ಅಧ್ಯಾಯ"

(1 ಕೊರಿಂಥದವರಿಗೆ..... 13:1-8, 13)

ನಾನು ಮನುಷ್ಯರ ಭಾಷೆಗಳನ್ನೂ ದೇವದೂತರ ಭಾಷೆಗಳನ್ನೂ ಆಡುವವನಾದರೂ ಪ್ರೀತಿಯಿಲ್ಲದವನಾಗಿದ್ದರೆ ನಾದಕೊಡುವ ಕಂಚೂ ಗಣಗಣಿಸುವ ತಾಳವೂ ಆಗಿದ್ದೇನೆ. 2. ನನಗೆ ಪ್ರವಾದವರವಿದ್ದರೂ ಎಲ್ಲಾ ರಹಸ್ಯಗಳೂ ಸಕಲ ವಿಧವಾದ ವಿದ್ಯೆಯೂ ತಿಳಿದರೂ, ಬೆಟ್ಟಗಳನ್ನು ತೆಗೆದಿಡುವುದಕ್ಕೆ ಬೇಕಾದಷ್ಟು ನಂಬಿಕೆಯಿದ್ದರೂ ನಾನು ಪ್ರೀತಿಯಿಲ್ಲದವನಾಗಿದ್ದರೆ ಏನೂ ಅಲ್ಲದವನಾಗಿದ್ದೇನೆ. 3. ನನಗಿರುವದೆಲ್ಲವನ್ನು ಅನ್ನದಾನ ಮಾಡಿದರೂ, ನನ್ನ ದೇಹವನ್ನು ಸುಡುವದಕ್ಕೆ ಒಪ್ಪಿಸಿದರೂ ಪ್ರೀತಿಯು ನನಗಿಲ್ಲದಿದ್ದರೆ ನನಗೇನೂ ಪ್ರಯೋಜನವಾಗುವುದಿಲ್ಲ. 4. ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆತೋರಿಸುವದು. ಪ್ರೀತಿಯು ಹೊಟ್ಟೆಕಿಚ್ಚುಪಡುವುದಿಲ್ಲ ಹೊಗಳಿಕೊಳ್ಳುವುದಿಲ್ಲ, ಉಬ್ಬಿಕೊಳ್ಳುವುದಿಲ್ಲ ಮರ್ಯಾದೆಗೆಟ್ಟು ನಡೆಯುವುದಿಲ್ಲ.

 5. ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ. ಸಿಟ್ಟುಗೊಳ್ಳುವುದಿಲ್ಲ. ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಗೊಳ್ಳುವುದಿಲ್ಲ. 6. ಅನ್ಯಾಯವನ್ನು ನೋಡಿ ಸಂತೋಷ ಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷ ಪಡುತ್ತೇನೆ. 7. ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನು ನಂಬುತ್ತದೆ. ಎಲ್ಲವನ್ನೂ ನಿರೀಕ್ಷಿಸುತ್ತದೆ. ಎಲ್ಲವನ್ನು ಸಹಿಸಿಕೊಳ್ಳುತ್ತದೆ. 8. ಪ್ರೀತಿಯು ಎಂದಿಗೂ ಬಿದ್ದು ಹೋಗುವುದಿಲ್ಲ. ಪ್ರವಾದನೆಗಳಾದರೋ ಇಲ್ಲದಂತಾಗುವವು, ವಾಣಿಗಳೋ ನಿಂತು ಹೋಗುವವು; ವಿದ್ಯೆಯೋ ಇಲ್ಲದಂತಾಗುವದು.

13. ಹೀಗಿರುವದರಿಂದ ನಂಬಿಕೆ, ನಿರೀಕ್ಷೆ, ಪ್ರೀತಿ ಈ ಮೂರೇ ನಿಲ್ಲುತ್ತವೆ. ಇವುಗಳಲ್ಲಿ ದೊಡ್ಡದು ಪ್ರೀತಿಯೇ.

## ದೇವರು ಪ್ರೀತಿಯಾಗಿದ್ದಾನೆ

''ದೇವರು ಪ್ರೀತಿ ಸ್ವರೂಪಿ, ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ.'' – 1 ಯೋಹಾನ 4:16

# ನೀನು ಇತರರಿಗೆ ಸಾಕ್ಷಿಕೊಡಬೇಕೆಂದು ಯೇಸು ಅಪೇಕ್ಷಿಸುತ್ತಾನೆ.



(ಮನೆಯಲ್ಲಿ, ಶಾಲೆಯಲ್ಲಿ, ದೇವಾಲಯ ದಲ್ಲಿ ಎಲ್ಲೆಲ್ಲಿಯೂ)

ಯೇಸು ಅವನಿಗೆ, ''ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು''.

– ಮಾರ್ಕ 5:19

''ಹೀಗಿರಲಾಗಿ ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ.'' – ಮತ್ತಾಯ 7:20

''ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ, ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ, ಶಮೆದಮೆ ಇಂಥವುಗಳೇ......''

– ಗಲಾತ್ಯದವರಿಗೆ 5:22

**ಒಬ್ಬನು ನಿಜವಾಗಿ ದೇವರ ಮಗುವಾಗಿದ್ದರೆ ಇತರರನ್ನು ಕ್ಷಮಿಸುವನು.**

''ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನು ಕ್ಷಮಿಸುವನು.'' – ಮತ್ತಾಯ 6:14

**ದೇವರು ಅಸಹ್ಯಿಸುವ ಏಳು ವಸ್ತುಗಳು**

''ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡು ಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳು ಸಾಕ್ಷಿ ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು. ಈ ಏಳೇ.'' ಜ್ಞಾನೋಕ್ತಿ 6:17–19






## ಶರೀರ ಭಾವದ ಕರ್ಮಗಳು

"..... ಜಾರತ್ವ, ಬಂಡುತನ (ಅವಿವಾಹಿತರ ನಡುವಣ ಲಿಂಗ ಸಂಭೋಗ) ನಾಚಿಕೆಗೇಡಿತನ .... ವಿಗ್ರಹಾರಾಧನೆ, ಮಾಟ, ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಕಕ್ಷಬೇದ, ಭಿನ್ನಮತ, ಮತ್ಸರ, ಕೊಲೆ, ಕುಡಿಕತನ, ದುಂದೌತನ ಇಂಥವುಗಳೇ...... ಇಂಥ ಕಾರ್ಯಗಳನ್ನು ನಡಿಸುವವರು ದೇವರ ರಾಜ್ಯಕ್ಕೆ ಬಾಧ್ಯರಾಗುವುದಿಲ್ಲ......" – ಗಲಾತ್ಯದವರಿಗೆ 5:19,21

"..... ಸಲಿಂಗ ಭೋಗಿಗಳು.... ಕಳ್ಳರು.... ಸುಲುಕೊಳ್ಳು ವವರು....."


– 1 ಕೊರಿಂಥದವರಿಗೆ 6:9,10

ಯೇಸು ನಿಮ್ಮನ್ನು ತನ್ನ ಆತ್ಮ ನಿಂದ ತುಂಬಿಸಿ, ನಿಮ್ಮನ್ನು ಶುದ್ಧರಾಗಿ ಮಾಡಲಿ

"ನಿಮ್ಮಲ್ಲಿ ಕೆಲವರು ಅಂಥವರಾಗಿದ್ದಿರಿ; ಆದರೂ ಕರ್ತನಾದ ಯೇಸು ಕ್ರಿಸ್ತನ ಹೆರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದು ಕೊಂಡಿರಿ. ದೇವಜನರಾದಿರಿ. ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ". – 1 ಕೊರಿಂಥವರಿಗೆ 6:11

# ನರಕವು ನಿಜವಾಗಿ ಇರುವ ಒಂದು ಸ್ಥಳ

(ಲೂಕ 16:19-26 ಓದಿರಿ)




ನೀನು ಯೇಸುಕ್ರಿಸ್ತನ ಮೇಲೆ ನಂಬಿಕೆ ಇಟ್ಟಿದ್ದಿ ಎಂದು ಖಚಿತ ಪಡಿಸಿಕೋ. ಆತನು ತನ್ನ ಜೀವ ಬಾಧ್ಯರ ಪುಸ್ತಕದಲ್ಲಿ ನಿನ್ನ ಹೆಸರನ್ನು ಬರೆಯುವನು.

''ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.''

– ಪ್ರಕಟನೆ 20:15

''...ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು. ಆ ಜೀವವುಆತನ ಮಗನಲ್ಲಿ ಆದೆ.''

– 1 ಯೋಹಾನ 5:11

''ಯಾಕೆಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ.'' – ರೋಮಾಪುರದವರಿಗೆ 6:23

''ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು.''

–ಯೋಹಾನ 3:36

''ಯೇಸು ಅವನಿಗೆ, 'ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ.' ಎಂದು ಹೇಳಿದನು.''

–ಯೋಹಾನ 14:6



ಯೋಹಾನನು ಪ್ರಕಟನೆ 21 ರಲ್ಲಿ ವಿವರಿಸಿದ ದರ್ಶನದಲ್ಲಿ ಒಂದು ನೂತನಾಕಾಶ ಮಂಡಲವನ್ನೂ ನೂತನ ಭೂಮಂಡಲವನ್ನು ಕಂಡನು.

''ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು ಇನ್ನು ಮರಣವಿರುವುದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವುದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು. .... ಆಗ ಸಿಂಹಾಸನದ ಮೇಲೆ ಕೂತಿದ್ದವನು; ಇಗೋ, ಎಲ್ಲವನ್ನು ಹೊಸದು ಮಾಡುತ್ತೇನೆ. ಅಂದನು.'' – ಪ್ರಕಟನೆ 21:4,5

ಯೋಹಾನನು ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಕೂಡ ಕಂಡನು. ಪಟ್ಟಣವು ಶುದ್ಧ ಗಾಜಿನಂತಿರುವ ಸೋಸಿದ ಭಂಗಾರವೇ ''..... ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನಗಳಿಂದ ಅಲಂಕೃತವಾಗಿದ್ದವು.....'' – ಪ್ರಕಟನೆ 21:18,19

# ತನ್ನನ್ನು ನಂಬಿದವರೆಲ್ಲರಿಗೆ ಒಂದು ಮನೆಯನ್ನು ಸಿದ್ಧಮಾಡಲು ಯೇಸು ಹೋಗಿದ್ದಾನೆ.

''ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಇವೆ, ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವುದಕ್ಕೆ ಹೋಗುತ್ತೇನಲ್ಲಾ, ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು.'' – ಯೋಹಾನ 14:1–3

ಈ ಶುಭವರ್ತಮಾನವನ್ನು ಇತರರಿಗೆ ಹೇಳು ಯೇಸು ಅವರಿಗೆ ''ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ'' ಎಂದು ಹೇಳಿದನು. – ಮಾರ್ಕ 16:15

''.....ಜ್ಞಾನಿಯು ಆತ್ಮಗಳನ್ನು ಆಕರ್ಷಿಸುವನು.....'' – ಜ್ಞಾನೋಕ್ತಿ 11:30

‘‘.... ನಾನು ನಿನ್ನನ್ನು ಎಂದಿಗೂಕ್ಕೈ ಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ.’’– ಇಬ್ರಿಯ 13:5

‘‘ನೀನು ಹೋಗುವಲ್ಲೆಲ್ಲಾ ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು.’’ – ಕೀರ್ತನೆ 91:11



‘‘.... ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು’’.

– ಯೋಹಾನ 10:28

‘‘... ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.’’ – ಮತ್ತಾಯ 28:20


‘‘ನಿನಗೆ ಸಂಭವಿಸುವುದಕ್ಕಿರುವ ಬಾಧೆಗಳಿಗೆ ಹೆದರಬೇಡ..... ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು’’ – ಪ್ರಕಟನೆ 2:10

‘‘ನಾನು... ಕತ್ತಲಲ್ಲಿ ಕೂತಿದ್ದರೂ ಕರ್ತನು ನನಗೆ ಬೆಳಕಾಗಿರುವನು.’’ ಮೀಕ 7:8

‘‘ನನ್ನನ್ನು ಕೇಳಿಕೋ, ನಾನು ನಿನಗೆ ಸದುತ್ತರವನ್ನು ದಯಪಾಲಿಸಿ.....’’ – ಯೆರೆಮೀಯ 33:3

# ಯೇಸು ಪುನಃ ಬರುತ್ತಾನೆ ಪ್ರತಿಯೊಬ್ಬನೂ ಸಮಾಧಿಯಿಂದ ಎದ್ದು ಬರುವನು.

''... ಸಮಾಧಿಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ ಜೀವಕ್ಕಾಗಿ ಪುನರುತ್ಥಾನವಾಗುವುದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವುದು.'' – ಯೋಹಾನ 5:28,29



## ಕ್ರಿಸ್ತನಲ್ಲಿ ಸತ್ತವರು ಮೊದಲು ಎದ್ದುಬರುವರು

''ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು.'' – 1 ಥೆಸಲೊನೀಕದವರಿಗೆ 4:17

''ಆ ಕಾಲವು ಯಾವಾಗ ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ, ಜಾಗರೂಕರಾಗಿರಿ.'' – ಮಾರ್ಕ 13:33

## ಯೇಸು ಹೇಗೆ ಬರುವನು?



''ಇಗೋ, ಮೇಘಗಳೊಂದಿಗೆ ಬರುತ್ತಾನೆ. ಎಲ್ಲರ ಕಣ್ಣುಗಳು ಆತನನ್ನು ಕಾಣುವವು....'' – ಪ್ರಕಟನೆ 1:7

ಸುಳ್ಳುಕ್ರಿಸ್ತರ ಮತ್ತು ಸುಳ್ಳುಪ್ರವಾದಿಗಳ ಕುರಿತು ಎಚ್ಚರವಾಗಿರಿ ''ಆಗ ಯಾರಾದರೂ ನಿಮಗೆ, ಇಗೋ ಕ್ರಿಸ್ತನು ಇಲ್ಲಿದ್ದಾನೆ, ಆಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ..... ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟು ಹೋಗ ಬೇಡಿರಿ ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ.''

– ಮತ್ತಾಯ 24:23,26

### ಯೇಸು ಫಕ್ಕನೆ ಆಕಾಶದಲ್ಲಿ ಮೇಘಗಳಲ್ಲಿ ಬರುವನು.

''ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದ ವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರು ವದು. ....ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು..... ಮನುಷ್ಯ ಕುಮಾರನು ಬಲದಿಂದಲೂ ಬಹು ಮಹಿಮೆ ಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು.'' – ಮತ್ತಾಯ 24:27,30

# ಕುರುಬನ ಕೀರ್ತನೆ (ಕೀರ್ತನೆ 23)

1. ಕರ್ತನು ನನಗೆ ಕುರುಬನು; ಕೊರತೆ ಪಡೆನು. 2. ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ. 3. ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ. 4. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವುದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ. 5. ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತಿ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತಿ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ. 6. ನಿಶ್ಚಯವಾಗಿ ನನ್ನ ಜೀವ ಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು. ನಾನು ಸದಾಕಾಲವೂ ಕರ್ತನ ಮನೆಯಲ್ಲಿ ವಾಸಿಸುವೆನು.

ದೇವರ ವಾಕ್ಯವನ್ನು ಇನ್ನೂ ಹೆಚ್ಚು ಕಲಿಯಬೇಕು ಎಂದು ನಿನಗೆ ಆಸಕ್ತಿಯಿದ್ದರೆ ಪ್ರಕಾಶಕರಿಗೆ ಬರೆಯಿರಿ.

Published in numerous languages by World Missionary Press, Inc. as God supplies funds in answer to prayer. If you would like more copies for prayerful distribution, specify which language(s) you need and how many booklets.

For more information or to request a free Bible study, please write to:

**WMP India Bible Literature**
**67 Beracah Road**
**Kilpauk, Chennai - 600 010**

Read booklets online or by App
www.wmp-readonline.org

ಉಚಿತವಾಗಿ - ಮಾರಬಾರದು

www.wmpress.org 4-17 2234 Kannada WTG

